MVC No.15/2021 PW-1

<u>ದಿನಾಂಕ **13.06.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಎಂ ಕೆ ಎನ್ ವಕೀಲರಿಂದಃ</u>

ಅರ್ಜಿಗೆ ಸಂಬಂದಪಟ್ಟಂತೆ 2 ಮಡಿಕಲ್ ಬಿಲ್ಲುಗಳನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ಶ್ರೀ ಎಸ್ ವೈ ಎಸ್ ವಕೀಲರಿಂದ ಃ</u>

ನಾನು ಚಾಲಕ. ಅಪಘಾತಕ್ಕಿಂತ ಮುಂಚೆಯೂ ಸಹ ನಾನು ಆಟೋ ಚಾಲಕನಾಗಿದ್ದೆ. ನನಗೆ ಡಿಎಲ್ ಇದೆ. ಅದನ್ನು ಹಾಜರು ಮಾಡಲು ತೊಂದರೆ ಇಲ್ಲ. ನಾನು ಡಿಎಲ್ ಮಾಡಿಸಿಕೊಂಡು 8 ವರ್ಷ ಆಗಿದೆ. ಆಟೋ ಚಾಲನೆಯ ಡಿಎಲ್ ನವೀಕರಣ 2020 ರಲ್ಲಿ ಮಾಡಿಸಿರುತ್ತೇನೆ. ನವೀಕರಣ ಡಿಎಲ್ ಅನ್ನು ಹಾಜರು ಪಡಿಸುತ್ತೇನೆ. ಅಪಘಾತದ ಮೊದಲೇ ಡಿಎಲ್ ನವೀಕರಣ ಮಾಡಿಸಿರುತ್ತೇನೆ.ಈಗಲೂ ಸಹ ಅದೇ ಡಿಎಲ್ ಅನ್ನು ಉಪಯೋಗಿಸುತ್ತಿದ್ದೇನೆ. ನಾನು 9 ನೇ ತರಗತಿಯವರೆಗೆ ಓದಿರುತ್ತೇನೆ.

2. ನಾನು ಬಸ್ಸಿಗಾಗಿ ನಿಂತಿದ್ದೆ ಆ ಸಮಯದಲ್ಲಿ ಮೋಟಾರ್ ಬೈಕ್ ಬಂದು ಅಪಘಾತ ಪಡಿಸಿತು. ವಾಹನವನ್ನು ಯಾರು ಓಡಿಸುತ್ತಿದ್ದರು ಎಂದು ಗೊತ್ತಿಲ್ಲ. ಬೈಕ್ ನಲ್ಲಿ ಒಬ್ಬರೇ ಬರುತ್ತಿದ್ದರು. ಅಪಘಾತ ಪಡಿಸಿದ ಬೈಕ್ ನಿಲ್ಲಿಸದೇ ಹೊರಟು ಹೋಯಿತು. ಆದರೆ ನಂಬರ್ ನೋಡಿಲ್ಲ. ಸಾರ್ವಜನಿಕರು ನೋಡಿ ಬೈಕ್ ನಂಬರಿ ಕೊಟ್ಟಿರುತ್ತಾರೆ. ವಾಹನದ ಮಾಲೀಕ ಪರಿಚಯವಿಲ್ಲ. ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ತಿಳಿಸಿರುತ್ತೇನೆ. ಈ ವಿಚಾರವಾಗಿ ನನ್ನ ತಮ್ಮ ದೂರನ್ನು ನೀಡಿರುತ್ತಾರೆ. ಪ್ರತ್ಯಕ್ಷ ಸಾಕ್ಷಿದಾರರನ್ನು ಕರೆತಂದು ಸಾಕ್ಷಿ ನುಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರು ಬರುವುದಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾದ 4-5 ದಿನಗಳ ನಂತರ

ದೂರನ್ನು ನೀಡಿರುತ್ತೇವೆ. ಈ ಮಧ್ಯದಲ್ಲಿ ಅಪಘಾತಪಡಿಸಿದವರು ನನ್ನನ್ನು ಮಾತನಾಡಿಸಿಲ್ಲ. ಅಪಘಾತದಿಂದ ನನಗೆ ಪೆಟ್ಟಾಗಿಲ್ಲ ಎಂದರೆ ಸುಳ್ಳು. ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ಮೆಡಿಕಲ್ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆಂದರೆ ಸುಳ್ಳು. 4 ಲಕ್ಷ ರೂಪಾಯಿ ಆಸ್ಪತ್ರೆಗೆ ಖರ್ಚಾಗಿದೆ ಎಂದು ಹೇಳಿ  ಬಿಲ್ಲುಗಳನ್ನು ಸೃಷ್ಟಿ ಮಾಡಿದ್ದೇನೆಂದರೆ ಸುಳ್ಳು. ನಾನು ತಿಂಗಳಿಗೆ 30 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.